ಶ್ರೀ ಎಸ್. ಗೋಪಾಲಗೌಡ.—ಈಗಾಗಲೇ ಕೇರಳಾ ಹೈಕೋರ್ಟಿನಲ್ಲಿ ಈ ಲೆವಿ ಬಗ್ಗೆ ಒಂದು ಆರ್ಡರ್ ಆಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಕೇರಳ ಸರಕಾರದಂತೆ ಎಲ್ಲರೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಾನು ಹೇಳಿದ್ದು ಕೇರಳ ಹೈಕೋರ್ಟ್.. .....

ಶ್ರೀ ಎಸ್. ನಿಜಲಿಂಗಪ್ಪ.—ಕೇರಳ ಹೈಕೋರ್ಟ್ ಮಾಡಿದ್ದರೆ ಮಾಡಿರಲಿ. ನೋಡೋಣ. ಯಾರೇ ಆಗಲಿ ಸಮಾಜದಲ್ಲಿ ಯೋಗ್ಯವಾದ ಕೆಲಸ ಮಾಡುವಾಗ ಅಡ್ಡಿ ಬಂದರೆ ಅಂತಹವರಿಗೆ ಅಂಟಿ ಸೋಷಿಯಲ್ ಎಲಿಮೆಂಟ್ಸ್ ಎಂಬುದಾಗಿ ಹೇಳುತ್ತಾರೆ.

ಶ್ರೀ ಎಮ್. ಎಸ್. ಕೃಷ್ಣನ್.—ಇದರಲ್ಲಿ ದೇಶದ್ರೋಹಿಗಳು ಎಂಬುದಾಗಿ ಬರೆದಿದೆಯೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಆ ರೀತಿ ಹೇಳುವುದು ಖಂಡಿತ ಸರಿಯಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ದೇಶದ್ರೋಹಿಗಳೆಂದರೆ ಆನ್‌ಹೆಲ್ತಿಯಾಟಿಕ್ ಎಂದಾಗುತ್ತದೆ. ಇಲ್ಲಿ ದೇಶದ್ರೋಹಿಗಳು ಎಂಬುದಾಗಿ ಉಪಯೋಗಿಸಿರುವುದು ಸರಿಯಾದ ಭಾಷಾಂತರವಲ್ಲ. ಅದಕ್ಕೆ ಸಮಾಜ ವಿರೋಧಿಗಳು ಎಂಬುದಾಗಿ ಹೇಳಿದ್ದರೆ ಸರಿಹೋಗುತ್ತಿತ್ತು. ಅದನ್ನು ಸರಿ ಮಾಡವುದಕ್ಕೆ ತಮಗೆ ಅಧಿಕಾರವಿದೆ. ಅದನ್ನು ಮಾಡಿ. ಮಾನ್ಯ ಸದಸ್ಯರು ಇನ್ನೊಂದು ವಿಚಾರ ಮಾಡಿದ್ದಾರೆ. ಸರ್ಕಾರದವರು ಈ ವರ್ಷ ಸಾಕಷ್ಟು ವಸೂಲುಮಾಡಿದ್ದಾರೆ. ಅನೇಕ ಜನರು ಸಂತೋಷದಿಂದ ಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಇನ್ನೂ ಕೊಟ್ಟಿಲ್ಲ. ಇಪತ್ತು ಈಗ ಇರತಕ್ಕ ಕಾನೂನನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಈ ಕಾನೂನು ಈ ವರ್ಷ ಜಾರಿಯಲ್ಲಿದೆ. ಜನ ಎಷ್ಟು ಕೊಡಬೇಕೋ ಅಷ್ಟನ್ನು ಕೊಡುತ್ತಾರೆ. ಎರಡು ವರ್ಷಗಳ ಕೆಳಗೆ ಎಲ್ಲಿ ರೈತರಿಗೆ ತೊಂದರೆಯಾಗುತ್ತಿತ್ತೋ ಅಲ್ಲಿ ಅದನ್ನು ನಿವಾರಣೆಮಾಡಿದ್ದೇವೆ. ಸರ್ಕಾರದವರು ಈಗ ಓಪನ್ ಪ್ರಿಯೆಮ್‌ಷನ್ ಪ್ರಕಾರವಾಗಿ ಕೊಂಡುಕೊಳ್ಳುವುದಕ್ಕೆ ಯೋಜನೆಮಾಡಿದ್ದಾರೆ. ಅದರೆ ಅದರ ಬಗ್ಗೆ ಇನ್ನೂ ನಾವು ತೀರ್ಮಾನಕ್ಕೆ ಬಂದಿಲ್ಲ. ಮುಂದಿನ ಸಲ ಮುಂಗಾರು ಮಳೆ ಬಂದಾಗ ಅದನ್ನು ತೀವ್ರವಾಗಿ ಯೋಚನೆಮಾಡುತ್ತೇವೆ. ಈ ವರ್ಷ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಇಡುವುದಕ್ಕಾಗುವುದಿಲ್ಲ. ಕೆಲವರು ಈಗಾಗಲೇ ಕೊಟ್ಟಿದ್ದಾರೆ. ಸಂತೋಷ. ಇನ್ನೂ ಕೊಡವೆ ಇರುವವರು ಕೊಡುವ ಅವಕಾಶವಿರುವಾಗ ಅದಕ್ಕಾಗಿ ಈಗಾಗಲೇ ತಲೆ ಕೆಡಿಸಿಕೊಂಡು ಹೋಗುವುದು ಬೇಡ. ಆದರೆ ದೇಶದ್ರೋಹಿ ಎಂಬ ಪದವನ್ನು ಉಪಯೋಗಿಸಿರುವುದನ್ನು ನಾನು ಒಪ್ಪುವುದಿಲ್ಲ. ಅದನ್ನು ತಿದ್ದಬೇಕಾಗುತ್ತದೆ. ಅನು ತಮಗೆ ಸೇರಿದ್ದು.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ಸಮಾಜ ವಿರೋಧಿಗಳು ಎಂಬುದಾಗಿ ಭಾಷಾಂತರ ಮಾಡಿದ್ದರೆ ಚೆನ್ನಾಗಿತ್ತು ಎಂಬುದಾಗಿ ಹೇಳಿದರು. ಅದೂ ಕೂಡ ಕಾನೂನಿಗೆ ವಿರೋಧವಾಗಿದೆ. ಒಟ್ಟಿನಲ್ಲಿ ಈ ಲೆವಿ ಕಾನೂನೇ ಜನರಿಗೆ ವಿರೋಧವಾಗಿ ಇರುವುದರಿಂದ ನಾವೆಲ್ಲರೂ ಅದಕ್ಕೆ ವಿರೋಧಮಾಡುತ್ತೇವೆ. ಅದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಪದವನ್ನೂ ಸಹ ಪ್ರೊಸಿಡಿಂಗ್ಸ್‌ನಿಂದ ತೆಗೆದುಹಾಕಬೇಕೆಂದು ನಾನು ಈಗ ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ. ಅಂಟಿ ಸೋಷಿಯಲ್ ಎಲಿಮೆಂಟ್ಸ್ ಎಂಬ ಪದವನ್ನೂ ಕೂಡ ಪ್ರೊಸೀಡಿಂಗ್ಸ್‌ನಿಂದ ತೆಗೆಯಬೇಕು.

Collection of Games Fee in Belgaum Taluk

225. Sri B. B. SAYANAK (Belgaum.).—

Will the Minister for Agriculture and Education be pleased to state :—

(*a*) whether the Primary School students from V to VII Class are paying games fee in Belgaum Taluk;

(*b*) if so, since when;

(*c*) the total amount collected from these students up till now;

(*d*) the total amount spent on the games ?

A.—Sri K. V. SHANKAR GOWDA (Minister for Agriculture and Education).—

(*a*) Yes.

(*b*) Since 1-6-1960.

(*c*) Rs. 66,016.

(*d*) Rs. 7,554.

Sri B. B. SAYANAK.—May I know why the games fee is being collected from the Primary School students, when the Primary Education is free in India and also in Mysore State Sir?

Sri K. V. SHANKARA GOWDA.—The sports fee is being collected from all the students, Sir.

Sri B. B.SAYANAK.—May I know whether primary school students are playing Indian games?

Sri K. V. SHANKARA GOWDA.—They are playing Indian games as well as some other games.

Sri B. B. SAYANAK.—May I know how many rupees you are collecting from each student per year?

Sri K. V. SHANKARA GOWDA.—Rs. 2 per student per year.

ಶ್ರೀ ಎಂ. ಎಸ್. ಕೃಷ್ಣನ್.—ಸ್ಪೋರ್ಟ್ಸ್ ಗೋಸ್ಕರ ಫೀಸನ್ನು ವಸೂಲು ಮಾಡುತ್ತಿದ್ದಿರಿ. ಆ ರೀತಿ ದುಡ್ಡನ್ನು ಕರೆಕ್ಟ್ ಮಾಡಿದರೂ ಯಾವ ರೀತಿಯಲ್ಲಿ ಅನುಕೂಲಗಳನ್ನು ಕೊಡಬೇಕೋ ಅದು ಸರ್ಕಾರಿ ಶಾಲೆಗಳಲ್ಲಿ ಇಲ್ಲ. ಖಾಸಗಿ ಶಾಲೆಗಳಲ್ಲ ಇನ್ನೂ ಹೆಚ್ಚಿಗೆ ಫೀಸನ್ನು ವಸೂಲು ಮಾಡಿದರೂ ಅಲ್ಲಿಯೂ ಸಾಕಷ್ಟು ಅನುಕೂಲಗಳು ಇಲ್ಲ. ಅದರ ಬಗ್ಗೆ ಎಷ್ಟೋ ದೂರುಗಳು ಬಂದಾಗ್ಯೂ ಸರ್ಕಾರದವರು ಇದುವರೆಗೆ ಏನು ಕ್ರಮವನ್ನು ತೆಗದುಕೊಂಡಿದ್ದಾರೆ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಸ್ಕೂಲುಗಳಲ್ಲಿ ಆಟದ ಮೈದಾನಗಳು ಇಲ್ಲವೆಂಬುದು ನಿಜ. ಮುಂದೆ ಅವನ್ನು ಕೊಡುವುದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

Sri B. B. SAYANAK.—The amount collected by way of sports fees is Rs. 66,016 and the amount spent is only Rs. 7,554. May I know why it is so, Sir?

Sri K. V. SHANKARA GOWDA.—The amount mentioned in the answer is only the amount spent on games. It can be utilised for other purposes also.

Sri P. B. NANDIHALI.—Will you kindly give concession in the collection of sports fee from the poor students?

Sri K. V. SHANKARA GOWDA.—No concession can be given.